ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ೨೧ನೇ ಸೆಪ್ಟಂಬರ್ ೧೯೮೩, ಭಾಧ್ರಪದ ೩೦ ೧೯೦೫ ಶಕ

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ಒಂಬತ್ತು ಗಂಟೆಗೆ ಸಮಾವೇಶಗೊಂಡಿತ್ತು.

ಮಾನ್ಯ ಅಧ್ಯಕ್ಷರು (ಶ್ರೀ ಡಿ.ಬಿ. ಚಂದ್ರೇಗೌಡರು) ಪೀಠವನ್ನು ಅಲಂಕರಿಸಿದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಚನ್ನಪಟ್ಟಣದಲ್ಲಿ ಮೊದಲನೇ ದರ್ಜೆಯ ಕಾಲೇಜನ್ನು ತೆರೆಯುವುದು

೩೯೯ ಶ್ರೀ ಎಂ, ವರದೇಗೌಡ (ಚನ್ನಪಟ್ಟಣ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚನ್ನಪಟ್ಟಣದಲ್ಲಿ ಒಂದನೇ ದರ್ಜೆಯ ಮಹಿಳೆಯರ ಕಾಲೇಜನ್ನು ತೆರೆಯುವ ಬಗ್ಗೆ ಸಲಹೆ ಏನಾದರೂ ಇದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ಮಹಿಳೆಯರಿಗೆ ಒಂದು ಕಾಲೇಜನ್ನು ಕೊಡುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಮಾನ್ಯ ಸದಸ್ಯರು ಹಾಜರಿರಲಿಲ್ಲ

ಹರಪನಹಳ್ಳಿ ತಾಲ್ಲೂಕಿನಲ್ಲಿ ಹರಿಜನ ಕೇರಿ ಹಾಗೂ ಲಂಬಾಣಿ ತಾಂಡಗಳಲ್ಲಿರುವ ಪ್ರಾಥಮಿಕ ಶಾಲೆಗಳು

೩೮೭ ಶ್ರೀ ಬಿ. ಹೆಚ್. ಯಂಕಾನಾಯ್ಕ (ಹರಪನಹಳ್ಳಿ) .—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಹರಿಜನವಾದ ಹಾಗೂ ಲಂಬಾಣಿ ತಾಂಡಗಳಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ?